# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2119 (2340)

2 ಸದಸ್ಯರ ಹೆಸರು : ಶ್ರೀ ಎಂ ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು)

3 ಉತ್ತರಿಸುವ ದಿನಾಂಕ : 27-03-2026

4 ಉತ್ತರಿಸುವ ಸಚಿವರು : ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖಾ ಸಚಿವರು

*****

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | 2030ರ ವೇಳೆಗೆ ರಾಜ್ಯವು 1 ಟ್ರಿಲಿಯನ್ ಡಾಲರ್ ಆರ್ಥಿಕತೆಯ ಗುರಿಯನ್ನು ಹೊಂದಿದೆ ಎಂದು ವಿವಿಧ ಮಾಧ್ಯಮಗಳಿಂದ ತಿಳಿದುಬಂದಿದ್ದು, 2026-27ಕ್ಕೆ ಸರ್ಕಾರ ಯಾವ ವಲಯ-ನಿರ್ದಿಷ್ಟ (sector-specific) ಮೈಲಿಗಲ್ಲುಗಳನ್ನು ರೂಪಿಸಿಕೊಂಡಿದೆ; ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ನಡೆದ ಆರ್ಥಿಕ ಸಮೀಕ್ಷೆ ಪ್ರಕಾರ ಯಾವ ವಲಯಗಳು ಕಳಪೆ ಪ್ರದರ್ಶನ ನೀಡುತ್ತಿವೆ. | ರಾಜ್ಯದಲ್ಲಿ ಇತ್ತೀಚೆಗೆ 2025-26ನೇ ಸಾಲಿನ ಆರ್ಥಿಕ ಸಮೀಕ್ಷೆ ವರದಿಯನ್ನು ಸದನದಲ್ಲಿ ಮಂಡಿಸಲಾಗಿರುತ್ತದೆ. 2025-26ನೇ ಸಾಲಿನಲ್ಲಿ ಉತ್ತಮ ಮುಂಗಾರಿನಿಂದಾಗಿ ಕೃಷಿ ವಲಯದಲ್ಲಿ ಶೇ.9.1 ರಷ್ಟು, ಕೈಗಾರಿಕಾ ವಲಯದಲ್ಲಿ ಶೇ. 6.7 ರಷ್ಟು ಹಾಗೂ ಸೇವಾ ವಲಯದಲ್ಲಿ ಶೇ. 8.1 ರಷ್ಟು ಸಮತೋಲಿತ ಬೆಳವಣಿಗೆ ಸಾಧಿಸಲಾಗುವುದೆಂದು ನಿರೀಕ್ಷಿಸಲಾಗಿದೆ. |
| (ಆ) | 1800 ಕ್ಕಿಂತ ಹೆಚ್ಚು ಯೋಜನೆಗಳಿಗೆ ಮಧ್ಯ-ವರ್ಷದಲ್ಲಿ ತಿದ್ದುಪಡಿಗಳನ್ನು ಮಾಡಲು 'ಅವಲೋಕನ' ವೇದಿಕೆಯಿಂದ ಡೇಟಾವನ್ನು ಹೇಗೆ ಮೇಲ್ವಿಚಾರಣೆಯನ್ನು ಸರ್ಕಾರದಿಂದ ಮಾಡಲಾಗುತ್ತಿದೆ. ಈ ವೇದಿಕೆಯಲ್ಲಿ ತೋರಿಸಿರುವ ಕಳಪೆ ಕಾರ್ಯಕ್ಷಮತೆಯಿಂದಾಗಿ ಸ್ಥಗಿತಗೊಂಡ ಯೋಜನೆಗಳ ಕುರಿತು ಸರ್ಕಾರ ಮಾಹಿತಿ ನೀಡುವುದು. | ಪ್ರತಿ ವರ್ಷ ಆಯವ್ಯಯದಲ್ಲಿ ಆರ್ಥಿಕ ಇಲಾಖೆಯಿಂದ ಪ್ರಕಟಿಸಲ್ಪಟ್ಟ ಲೆಕ್ಕಶೀರ್ಷಿಕೆ/ಯೋಜನೆಗಳಿಗೆ ನಿಗಧಿಪಡಿಸಲಾದ ಅನುದಾನದ (BE) ಮಾಹಿತಿಯನ್ನು ಅವಲೋಕನ ತಂತ್ರಾಂಶದಲ್ಲಿ ಇಲಾಖಾವಾರು ಅಪ್‌ಲೋಡ್ ಮಾಡಿದ ನಂತರ ಬಿಡುಗಡೆ ಮತ್ತು ವೆಚ್ಚದ ಮಾಹಿತಿಯು ಖಜಾನೆ-2 ರ ಮುಖಾಂತರ ಸಂಯೋಜಿಸಲ್ಪಟ್ಟಿರುತ್ತದೆ. ಮುಂದುವರೆದು, ಪೂರಕ ಅಂದಾಜು (1), (2) ಮತ್ತು (3) ರಡಿ ಒದಗಿಸಲಾಗುವ ಮಾಹಿತಿಯನ್ನಾಧರಿಸಿ ಲೆಕ್ಕಶೀರ್ಷಿಕೆವಾರು ಅವಲೋಕನದಲ್ಲಿ ಇಂಧೀಕರಿಸಲಾಗುವುದು. ಅವಲೋಕನ ತಂತ್ರಾಂಶದ ಮಾಹಿತಿಯನ್ನಾಧರಿಸಿ ಇಲಾಖಾವಾರು ಪ್ರಗತಿಯನ್ನು ಪ್ರತಿ ತಿಂಗಳು ಮಾನ್ಯ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆಯುವ ಕೆಡಿಪಿ ಸಭೆಯಲ್ಲಿ ಪರಿಶೀಲಿಸಲಾಗುವುದು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಇ) | ಕಳೆದ ಹಣಕಾಸು ವರ್ಷದಲ್ಲಿ ಸರ್ಕಾರಿ ಉಪಕ್ರಮಗಳಿಗಾಗಿ 'ಆಕಾಂಕ್ಷಾ' ಪೋರ್ಟಲ್ ಮೂಲಕ ವಾಸ್ತವವಾಗಿ ಸಂಗ್ರಹಿಸಲಾದ ಒಟ್ಟು ಸಿಎಸ್‌ಆರ್ ನಿಧಿ ಎಷ್ಟು? (ಮಾಹಿತಿ ನೀಡುವುದು) | ಯುಎನ್‌ಡಿಪಿ ಸಹಯೋಗದೊಂದಿಗೆ ಯೋಜನಾ ಇಲಾಖೆಯಲ್ಲಿ ಆಕಾಂಕ್ಷ ಪೋರ್ಟಲ್ ನ್ನು 2021 ರ ಕೋವಿಡ್ ಸಮಯದಲ್ಲಿ ಅಭಿವೃದ್ಧಿಪಡಿಸಲಾಗಿದ್ದು, ನಂತರದ ಆರ್ಥಿಕ ವರ್ಷಗಳಲ್ಲಿ ಆಕಾಂಕ್ಷ ಪೋರ್ಟಲ್‌ನಲ್ಲಿ ಯಾವುದೇ ಸಿಎಸ್‌ಆರ್ ಕಾರ್ಯಚಟುವಟಿಕೆಗಳು ನಡೆದಿರುವುದಿಲ್ಲ. ಸಂಬಂಧಪಟ್ಟ ಇಲಾಖೆಗಳು ನೇರವಾಗಿ ಸಿಎಸ್‌ಆರ್ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುತ್ತಿದ್ದು, ಸದರೀ ಪೋರ್ಟಲ್‌ನಲ್ಲಿ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ. |

**ಸಂಖ್ಯೆ: ಪಿಡಿಎಸ್/403/ಐಪಿಆರ್/2026**

(ಡಿ. ಸುಧಾಕರ್)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖಾ ಸಚಿವರು